**ಸಿ ಸಿ 934/2022 ಪಿಡಬ್ಲ್ಯೂ1**

**ಸಾಕ್ಷಿಯನ್ನು ದಿನಾಂಕ 25.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಂ ಎಂ ವಕೀಲರಿಂದಃ**

ನಾನು ಪಿ ಯು ಸಿ ವರೆಗೆ ಓದಿದ್ದೇನೆ. ನಾನು ಹಾಗೂ ಆರೋಪಿ ತುಂಬಾ ಪರಿಚಯಸ್ಥರು ಎಂದರೆ ಸರಿ. ನಾನು ಮತ್ತು ಆರೋಪಿಯು ಸುಮಾರು 8-9 ವರ್ಷಗಳಿಂದ ಪರಿಚಯ. ನಾನು ಆರೋಪಿಗೆ ಒಂದು ಮೊಬೈಲ್ ಕೊಡಿಸಿದ್ದೆ ಎಂದರೆ ಸರಿಯಲ್ಲ. ನಾನು ಒಂದು ಹಣಕಾಸು ಸಂಸ್ಥೆ ನಡೆಸುತ್ತಿದ್ದೆ ಎಂದರೆ ಸರಿಯಲ್ಲ.

ನಾನು ಆರೋಪಿಗೆ ಹಣ ನೀಡಿದಾಗ ನನ್ನ ಹೆಂಡತಿ ಸ್ಥಳದಲ್ಲಿ ಇದ್ದರು. ಚೆಕ್ಕಿನ ಮೇಲೆ ದಿನಾಂಕವನ್ನು ನಾನೇ ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ, ಆರೋಪಿಯೇ ನಮೂದು ಮಾಡಿದ್ದಾರೆ. ದಿನಾಂಕ 04.01.2021 ಎಂದು ಚೆಕ್ಕಿನ ಮೇಲೆ ದಿನಾಂಕವನ್ನು ನಮೂದು ಮಾಡಿಕೊಟ್ಟಿದ್ದಾರೆ. ಚೆಕ್ಕಿನ ಸಂಖ್ಯೆ ನನಗೆ ನೆನಪಿಲ್ಲ. ನಾನು ಆರೋಪಿಗೆ ಹಣ ನೀಡಿದ 2 ದಿನಗಳ ಮೊದಲು ಆರೋಪಿಯು ನನ್ನನ್ನು ಹಣ ಕೇಳಿದ್ದರು.

ಆರೋಪಿಯ ಸಹಿಗೂ ಮತ್ತು ಬರವಣಿಗೆಗೂ ತುಂಬಾ ವ್ಯಾತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಹಿಂದೆ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಅಲ್ಲಿ ಮಹಿಳೆಯರು ಮತ್ತು ಎಲ್ಲರೂ ನನಗೆ ಚೆನ್ನಾಗಿ ಪರಿಚಯ ಇದ್ದರು ಎಂದರೆ, ಕೆಲಸ ಮಾಡುವವರೆಲ್ಲರೂ ನನಗೆ ಪರಿಚಯ ಇದ್ದರು. ಆರೋಪಿಯು ಈಗ ಮೈಸೂರಿನಲ್ಲಿ ಇದ್ದಾರೆ ಎಂದರೆ ಸರಿ. ಆರೋಪಿಗೂ ಮತ್ತು ಚೆಕ್ಕಿನ ಹಣಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಆರೋಪಿಗೆ ನನ್ನ ವಕೀಲರ ಮೂಲಕ ಕಳುಹಿಸಿರುವ ನೋಟೀಸಿನಲ್ಲಿ ನನ್ನ ಸಹಿ ಇದೆಯೋ ಇಲ್ಲವೋ ನನಗೆ ನೆನಪಿಲ್ಲ. ನೋಂದಾಯಿತ ಅಂಚೆ ಸ್ವೀಕೃತಿಯಲ್ಲಿ

ಆರೋಪಿಯ ಹೆಸರು ಮತ್ತು ವಿಳಾಸ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**